**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಇ.ಸಿ.ಎ. 1/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇ.ಎಸ್.ಮಹೇಶ್ | ಪಿ.ಡಬ್ಲ್ಯೂ.4 |
| ತಂದೆಯ/ಗಂಡನ ಹೆಸರು | : | ಇ.ಎನ್.ಸತ್ಯನಾರಾಯಣ | |
| ವಯಸ್ಸು | : | 43 ವರ್ಷ | |
| ಕೆಲಸ | : | ಪಿ.ಐ., ಬೆಸ್ಕಾಂ ವಿಜಿಲೆನ್ಸ್, ಮಲ್ಲೇಶ್ವರಂ, ಬೆಂಗಳೂರು | ಸಾ ಪ್ರ ಬೋ |
| ವಾಸ | : | ಬೆಂಗಳೂರು | ದಿಃ21.08.2025 |

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ ಎಲ್.ಕೆ.ಎಸ್. ವಕೀಲರಿಂದ**

ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ. ಹೊಳಲ್ಕೆರೆ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 213/2018 ಕ್ಕೆ ಸಬಂಧಿಸಿದಂತೆ ನನ್ನ ಹಿಂದಿನ ತನಿಖಾಧಿಕಾರಿಯಾದ ದಯಾನಂದಯ್ಯ ರವರಿಂದ ಪ್ರಕರಣದ ಕಡತವನ್ನು ದಿನಾಂಕ 03.08.2018 ರಂದು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ಅಪಘಾತ ನಡೆದ ಸ್ಥಳವಾದ ಚೀರನಹಳ್ಳಿ ಗ್ರಾಮದ ಸಣ್ಣ ಕೆಂಚಪ್ಪರವರಿಗೆ ಸೇರಿದ ಸ.ನಂ.41/1 ಎ ಜಮೀನಿಗೆ ತೆರಳಿ ಪಂಚರಾದ ಸಿದ್ದೇಶ್ ಬಿನ್ ಬೈರೇಶಪ್ಪ ಮತ್ತು ಪಾಲಕ್ಷಪ್ಪ ಬಿನ್ ಗೋವಿಂದಪ್ಪರವರನ್ನು ಬರಮಾಡಿಕೊಂಡು, ಸಾಕ್ಷಿದಾರರಾದ ಶ್ರೀನಿವಾಸ ಬಿನ್ ಕರಿಯಪ್ಪ ರವರು ಸ್ಥಳ ತೋರಿಸಿದ ಮೇರೆಗೆ ಮದ್ಯಾಹ್ನ 12 ಗಂಟೆಯಿಂದ 1 ಗಂಟೆಯವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ದಿನಾಂಕ 25.11.2018 ರಂದು ನಮ್ಮ ಠಾಣೆಯ ಸಿಬ್ಬಂಧಿಯಾದ ಹೆಚ್.ಸಿ.ದಯಾನಂದಯ್ಯರವರು ಚೀರನಹಳ್ಳಿ ಗ್ರಾಮದ ಸುಮಿತ್ರಮ್ಮ ಕೋಂ ಲೇಟ್ ಮರಿಗಪ್ಪರವರ ಮನೆಯ ಮುಂದೆ ಸುಮಿತ್ರಮ್ಮ ಕೋಂ ಮರಿಗಪ್ಪರವರು ಟ್ರಾಕ್ಟರ್‌ನ್ನು ಮತ್ತು ಟ್ರೈಲರ್‌ನ್ನು ಹಾಜರುಪಡಿಸುವ ಕುರಿತು ನೀಡಿದ್ದ ನೋಟೀಸನ್ನು ಸ್ವೀಕರಿಸಲು ನಿರಾಕರಿಸಿದ್ದ ಬಗ್ಗೆ ಪಂಚನಾಮೆಯನ್ನು ಜರುಗಿಸಿಕೊಂಡು ಬಂದು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ದಿನಾಂಕ 13.12.2018 ರಂದು ಸುಮಿತ್ರಮ್ಮ ಕೋಂ ಮರಿಗಪ್ಪ ರವರ ಮನೆಯ ಬಳಿ ಪಂಚರಾದ ಹೆಚ್.ರುದ್ರಪ್ಪ ಬಿನ್ ಹನುಮಂತಪ್ಪ ಮತ್ತು ಜಿ.ಬಿ.ಓಂಕಾರಪ್ಪ ಬಿನ್ ಬಸವಂತಪ್ಪರವರ ಸಮಕ್ಷಮ ಸ್ವರಾಜ್ ಕಂಪನಿಯ 735 ಎಫ್.ಇ. ಹಾಗೂ ಇಂಜಿನ್ ನಂಬರ್ 391354 ಬಿ.ಬಿ.00958 ಎ ಮತ್ತು ಚಾಸಿಸ್ ನಂ.ಡಬ್ಲ್ಯೂ.ಆರ್.ಟಿ.ಡಿ. 31419110776 ನ್ನು ಮದ್ಯಾಹ್ನ 1 ರಿಂದ 2 ಗಂಟೆಯವರೆಗಗಿನ ಪಂಚನಾಮೆಯ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅದೇ ದಿನ ಠಾಣೆಗೆ ಬಂದು ಮೇಲ್ಕಂಡ

ಟ್ರಾಕ್ಟರ್ ಇಂಜಿನ್ ಕುರಿತು ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಪಂಚರಾದ ದಯಾನಂದಪ್ಪ ಬಿನ್ ಮುರಿಗಪ್ಪ ಮತ್ತು ಇಸ್ಮೈಲ್ ಖಾನ್ ಬಿನ್ ಖಾದರ್ ಖಾನ್‌ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ದಿನಾಂಕ 28.10.2018 ರಂದು ಗಾಯಾಳುವಾದ ಸಂತೋಷ್ ಬಿನ್ ಶೇಖರಪ್ಪ ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 14.04.2019 ರಂದು ಗಾಯಾಳುವಾದ ಸಂತೋಷ್ ಬಿನ್ ಶೇಖರಪ್ಪರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದೂರುದಾರರಾದ ಮಂಜುನಾಥ್ ಬಿನ್ ಮುರಿಗೇಂದ್ರಪ್ಪರವರ ಹೇಳಿಕೆಯನ್ನು ದಿನಾಂಕ 14.04.2019 ರಂದು ಪಡೆದುಕೊಂಡಿರುತ್ತೇನೆ. ಆರೋಪಿತರಾದ ಸಣ್ಣ ಕೆಂಚಪ್ಪರವರ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತರ ವಿರುದ್ಧ ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನಿಪಿ.5 ಮತ್ತು 6 ರಂತೆ ಜರುಗಿಸಿರುವ ಪಂಚನಾಮೆಯನ್ನು ಹಾಗೂ 7 ಮತ್ತು 8 ರಂತೆ ಜರುಗಿಸಿರುವ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಪಿರ್ಯಾದುದಾರರಿಂದ ಪಡೆದುಕೊಂಡಂತಹ ನಿಪಿ.9 ಮತ್ತು 10 ರ ಮರು ಹೇಳಿಕೆಗಳನ್ನು ಹಾಗೂ ಗಾಯಾಳುವಿನ ಮರು ಹೇಳಿಕೆಯನ್ನು ನಿಪಿ.9, 10 ಮತ್ತು 12 ರಂತೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ.14 ರ ಗಾಯದ ಪ್ರಮಾಣ ಪತ್ರವನ್ನು ಮತ್ತು 15 ರ ದೋಷಾರೋಪಣ ಪಟ್ಟಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಹೆಚ್.ಆರ್.ಎಸ್.. ವಕೀಲರಿಂದ**

ನ್ಯಾಯಾಲಯದ ಕಲಾಪ ಮುಗಿದ ಕಾರಣ, ಮದ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

**ಇ.ಸಿ.ಎ 1/2019, ಪಿ.ಡಬ್ಲೂ-4 ಹೆಸರುಃ ಇ.ಎಸ್.ಮಹೇಶ್**

**ದಿಃ21-08-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಹೆಚ್.ಆರ್.ಎಸ್. ವಕೀಲರಿಂದ**

ಈ ಪ್ರಕರಣದ ಅಪಘಾತಕ್ಕೆ ಸಂಬಂಧಿಸಿದಂತೆ ಪಿರ್ಯಾದುದಾರರು ಸಲ್ಲಿಸಿರುವ ನಿಪಿ.2 ರ ದೂರಿನಂತೆ ಕೆ.ಎ.16/ಇ.ಎಫ್.-6937 ರ ಬೈಕಿನಿಂದ ಅಪಘಾತ ಆಗಿರುವ ಬಗ್ಗೆ ದೂರನ್ನು ನೀಡಿದ್ದರು ಎಂದರೆ ಸರಿ. ನಿಪಿ.2 ರ ದೂರಿನ ಆಧಾರದಲ್ಲಿ ನನ್ನ ಹಿಂದಿನ ತನಿಖಾಧಿಕಾರಿಗಳಾದ ದಯಾನಂದಯ್ಯರವರು ಮುಖ್ಯಪೇದೆರವರು ಪ್ರ.ವ. ವರದಿಯನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದೂರಿನ ಆಧಾರದಲ್ಲಿ ನನ್ನ ಹಿಂದಿನ ತನಿಖಾಧಿಕಾರಿಗಳು ಸ್ಥಳ ಪಂಚನಾಮೆಯನ್ನು, ವಾಹನ ಅಮಾನತ್ತು ಪಂಚನಾಮೆಯನ್ನು ಮಾಡಿ ಬೈಕಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿತ್ರದುರ್ಗ ರವರಿಂದ ಐ.ಎಂ.ವಿ. ವರದಿಯನ್ನು ಸ್ವೀಕರಿಸಿದ್ದರು ಎಂದರೆ ಸರಿ. ನಿಪಿ.13 ರ ಐ.ಎಂ.ವಿ. ವರದಿ ಪ್ರಕಾರ ಬೈಕಿನ ಮುಂಭಾಗ ಜಖಂಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೈಕಿನಿಂದ ಅಪಘಾತ ಆಗಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ದೂರುದಾರರು ನೀಡುವ ದೂರಿನ ಆಧಾರದಲ್ಲಿ ಅಪಘಾತಕ್ಕೆ ಸಂಬಂಧಿಸಿದ ವಾಹನವನ್ನು ಅಮಾನತ್ತುಪಡಿಸಿಕೊಂಡಲ್ಲಿ ಮಾತ್ರ ವಾಹನ ತಪಾಸಣ ವರದಿಯನ್ನು ಪಡೆದುಕೊಳ್ಳಲು ಸಾರಿಗೆ ಇಲಾಖೆಗೆ ನಿವೇದನೆಯನ್ನು ನೀಡುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ ನನ್ನ ಹಿಂದಿನ ತನಿಖಾಧಿಕಾರಿಗಳು ನಿವೇದನೆಯನ್ನು ನೀಡಿದ್ದು, ನನ್ನ ತನಿಖೆಯ ಕಾಲಕ್ಕೆ ನಿಪಿ.13 ರಲ್ಲಿ ಉಲ್ಲೇಖಿಸಿರುವ ಕೆ.ಎ.16-ಇ.ಎಫ್.-6937 ರ ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದು ಕಂಡುಬಂದಿರುತ್ತದೆ.

4. ಈ ಪ್ರಕರಣದ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಎಂ.ಎಲ್.ಸಿ. ವರದಿಯನ್ನು ಪರಿಶೀಲನೆ ಮಾಡಿಲ್ಲ. ನಿಪಿ.14 ರ ಗಾಯದ ಪ್ರಮಾಣ ಪತ್ರದಲ್ಲಿ 'On 26.06.2018 at around 2PM at Cheeranahalli Gate while he was going by walking bike hitted him and met with an incident' ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಿರ್ಯಾದುದಾರರು ಗಾಯಾಳುವನ್ನು ಆಸ್ಪತ್ರೆಗೆ ಸೇರಿಸುವಾಗ ಆ ರೀತಿ ಮಾಹಿತಿ ನೀಡಿದ್ದು, ಆ ಪ್ರಕಾರ ವೈದ್ಯಾಧಿಕಾರಿಗಳು ಉಲ್ಲೇಖಿಸಿರುತ್ತಾರೆ ಎಂದು ಹೇಳುತ್ತಾರೆ. ಬೈಕಿನ ಚಾಲಕನ

ತಪ್ಪಿನಿಂದ ಅಪಘಾತ ಏರ್ಪಟ್ಟಿದ್ದರಿಂದಲೇ ಆ ರೀತಿ ನಿಪಿ.14 ರಲ್ಲಿ ಉಲ್ಲೇಖ ಇದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ನಿಪಿ.15 ರ ದೋಷಾರೋಪಣ ಪಟ್ಟಿಯಲ್ಲಿ ದಿನಾಂಕ 26.10.2018 ರಂದು ಮದ್ಯಾಹ್ನ 2 ಗಂಟೆ ಸಮಯದಲ್ಲಿ ಅಪಘಾತ ಏರ್ಪಟ್ಟಿರುವ ಬಗ್ಗೆ ಉಲ್ಲೇಖ ಇದೆ ಎಂದರೆ, ಸಾಕ್ಷಿ ಬೆರಳಚ್ಚಿನ ತಪ್ಪಿನಿಂದ ದಿನಾಂಕ 26.06.2018 ಎಂದು ನಮೂದಿಸುವ ಬದಲಾಗಿ ದಿನಾಂಕ 26.10.2018 ಎಂದು ನಮೂದಾಗಿದೆ ಎಂದು ಹೇಳುತ್ತಾರೆ. ಟ್ರಾಕ್ಟರ್‌ನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನಿಂತಿದ್ದ ಟ್ರಾಕ್ಟರ್‌ನಲ್ಲಿ ಗಾಯಾಳು ಹಗ್ಗವನ್ನು ಎಳೆಯುತ್ತಿದ್ದಾಗ 1 ನೇ ಆರೋಪಿತನಾದ ಸಣ್ಣ ಕೆಂಚಪ್ಪರವರು ಹಗ್ಗವನ್ನು ಸಡಿಲುಬಿಟ್ಟಾಗ ಗಾಯಾಳು ಒಮ್ಮೆಲೆ ಕೆಳಗೆ ಬಿದ್ದು, ಸೊಂಟ ಮುರಿದಿರುತ್ತದೆ ಎಂದು ಹೇಳುತ್ತಾರೆ. ಚೀರನಹಳ್ಳಿ ಗ್ರಾಮದ ಸ.ನಂ.41/1 ಎ ಜಮೀನಿಗೆ ಟ್ರಾಕ್ಟರ್‌ನ್ನು ಯಾರು ಚಾಲನೆ ಮಾಡಿಕೊಂಡು ಹೋಗಿ ನಿಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಮಾಲೀಕರಾದ ಸಣ್ಣ ಕೆಂಚಪ್ಪರವರೆ ನಿಲ್ಲಿಸಿರಬಹುದು ಎಂದು ಹೇಳುತ್ತಾರೆ. ಕೆ.ಎ.16/ ಟಿ.ಎ.-6357 ರೊಂದಿಗೆ ಇದ್ದಂತಹ ಟ್ರೈಲರ್‌ನ ಸಂಖ್ಯೆ ಹಾಗೂ ಅದರ ಮಾಲೀಕರು ಯಾರು ಎಂಬ ಪ್ರಶ್ನೆಗೆ, ಸಾಕ್ಷಿಯು ಸದರಿ ಟ್ರಾಕ್ಟರ್‌ನೊಂದಿಗೆ ಇದ್ದಂತಹ ಟ್ರೈಲರ್ ಕುರಿತು 2 ನೇ ಆರೋಪಿತರು ಮಾಹಿತಿಯನ್ನು ನೀಡಿಲ್ಲ ಎಂದು ಹಾಗೂ ಸದರಿ ಟ್ರೈಲರ್ ಯಾವುದು ಎಂಬ ಬಗ್ಗೆ ಸಾಕ್ಷ್ಯ ನಾಶಪಡಿಸಿರುತ್ತಾರೆ ಎಂದು, ಹಾಗಾಗಿ ಆರೋಪಿತರ ವಿರುದ್ಧ ಸಾಕ್ಷ್ಯ ನಾಶದ ಕುರಿತು ಕೂಡ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ಈ ಅರ್ಜಿಯ 2 ನೇ ಎದುರುದಾರರು ನನಗೆ ಟ್ರಾಕ್ಟರ್‌ನ್ನು ಎರಡು ವರ್ಷಗಳಿಂದ ಉಪಯೋಗಿಸುತ್ತಿಲ್ಲ ಎಂಬ ಬಗ್ಗೆ ಕಾನೂನು ತಿಳುವಳಿಕೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ನೋಟಿಸಿಗೆ ಉತ್ತರವನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ನೋಟಿಸಿನಲ್ಲಿ 2 ನೇ ಎದುರುದಾರರು ಟ್ರಾಕ್ಟರ್‌ಗೆ ಟ್ರೈಲರ್‌ನ ಅವಶ್ಯಕತೆ ಇಲ್ಲದ ಕಾರಣ ಟ್ರೈಲರ್‌ನ್ನು ಹೊಂದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಸುಳ್ಳಾಗಿ ಹೇಳಿದ್ದಾರೆ ಎಂದು ಹೇಳುತ್ತಾರೆ. 2 ನೇ ಎದುರುದಾರರು ಈ ಅರ್ಜಿಗೆ ಸಂಬಂಧಿಸಿದ ಅಪಘಾತ ಬೈಕಿನ ಚಾಲಕನ ತಪ್ಪಿನಿಂದ ಆಗಿದ್ದು, ನನಗೆ ತನಿಖಾಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ತಾಲ್ಲೂಕು ಕಾನೂನು ಸೇವಾ ಸಮಿತಿ, ಹೊಳಲ್ಕೆರೆರವರಿಗೆ ದೂರನ್ನು ನೀಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪ್ರಕರಣದಲ್ಲಿ ನಾನು ಹಾಜರಾಗಿ ಉತ್ತರವನ್ನು ನೀಡಿದ್ದು, ಪ್ರಕರಣ ಮುಕ್ತಾಯಗೊಂಡಿದೆ ಎಂದು ಹೇಳುತ್ತಾರೆ. ಗಾಯಾಳುವಿನ ಮರು ಹೇಳಿಕೆಯನ್ನು ಆತನ ಮನೆಯಲ್ಲಿ ಪಡೆದುಕೊಂಡಿದ್ದು, ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಮರು ಹೇಳಿಕೆಗಳನ್ನು ಈ ಪ್ರಕರಣದ ಸಲುವಾಗಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದೋಷಾರೋಪಣ ಪಟ್ಟಿಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ 279 ನ್ನು

ಕೈಬಿಟ್ಟಿರುತ್ತೇನೆ ಎಂದರೆ ಸರಿ. 1 ನೇ ಎದುರುದಾರರ ನಿರ್ಲಕ್ಷತೆ ಇಲ್ಲದ ಕಾರಣ ಮೇಲ್ಕಂಡ ಕಲಂನ್ನು ತೆಗೆದುಹಾಕಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದ**

5. ದಿನಾಂಕ 03.08.2018 ರಂದು ನಾನು ಚೀರನಹಳ್ಳಿಗೆ ಹೇಳಿಕೆಯನ್ನು ಪಡೆದುಕೊಳ್ಳಲು ಹೋಗಿದ್ದು, ನನ್ನೊಂದಿಗೆ ನನ್ನ ಸಿಬ್ಬಂದಿ ಬಂದಿದ್ದರು, ಅವರ ಹೆಸರು ಗೊತ್ತಿಲ್ಲ. ನಿಪಿ.5 ರ ಪಂಚನಾಮೆಯನ್ನು ಜರುಗಿಸುವ ಕುರಿತಾಗಿ ಪಂಚರಿಗೆ ನೋಟೀಸನ್ನು ನೀಡಿದ್ದೆನು. ಸದರಿ ನೋಟೀಸುಗಳನ್ನು ನನ್ನ ದೋಷಾರೋಪಣ ಪಟ್ಟಿಯೊಂದಿಗೆ ಸಲ್ಲಿಸಿಲ್ಲ. ದೋಷಾರೋಪಣ ಪಟ್ಟಿಯೊಂದಿಗೆ ನೋಟೀಸುಗಳನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ.5 ರ ಸ್ಥಳ ಪಂಚನಾಮೆಯನ್ನು ನನ್ನ ಸಿಬ್ಬಂಧಿ ಬರೆದಿದ್ದು, ಅವರ ಹೆಸರು ನೆನಪಿಲ್ಲ. ನಿಪಿ.5 ರ ಸ್ಥಳ ಪಂಚನಾಮೆಗೆ ನನ್ನ ಸಿಬ್ಬಂಧಿಯ ಸಹಿಯನ್ನು ಪಡೆದುಕೊಂಡಿಲ್ಲ. ನಿಪಿ.7 ರ ವಾಹನ ಅಮಾನತ್ತು ಪಂಚನಾಮೆಯನ್ನು ನನ್ನ ಸಿಬ್ಬಂಧಿ ಬರೆದಿದ್ದು, ಯಾರು ಬರೆದರು ಎಂದು ಈಗ ನೆನಪಿಲ್ಲ. ನಿಪಿ.7 ರ ಪಂಚನಾಮೆಯ ಸಾಕ್ಷಿದಾರರು ಹೊಳಲ್ಕೆರೆ ಪಟ್ಟಣಕ್ಕೆ ಸೇರಿದವರು ಮತ್ತು ಕೆಂಗುಂಟೆ ಗ್ರಾಮದವರು ಎಂದರೆ ಸರಿ. ನಿಪಿ.7 ರ ಪಂಚನಾಮೆಯ ಪಂಚರಿಗೆ ಅದೇ ದಿನ ನೋಟಿಸನ್ನು ನೀಡಿದ್ದೆನು. ನಿಪಿ.7 ರ ಪಂಚರು ನಮ್ಮ ಠಾಣೆಯ ಬಳಿ ಬಂದಿದ್ದರು, ಆಗ ನೋಟೀಸನ್ನು ನೀಡಿದ್ದೆನು. ಸದರಿ ನೋಟೀಸುಗಳನ್ನು ದೋಷಾರೋಪಣ ಪಟ್ಟಿಯೊಂದಿಗೆ ಸಲ್ಲಿಸಿಲ್ಲ.

6. ಸುಮಿತ್ರಮ್ಮರವರಿಗೆ ಸೇರಿದ ಮನೆ ಯಾವ ಸ್ವರೂಪದ್ದು ಎಂದು ನೆನಪಿಲ್ಲ. ಟ್ರಾಕ್ಟರ್‌ನ್ನು ಅಮಾನತ್ತುಪಡಿಸಿಕೊಳ್ಳಲು 2 ನೇ ಎದುರುದಾರರು ಕೀ ನೀಡಿದ್ದು, ಟ್ರಾಕ್ಟರ್‌ನ್ನು ಚಾಲನೆ ಮಾಡಿಕೊಂಡು ಠಾಣೆಗೆ ತಂದಿರುತ್ತೇವೆ. ಟ್ರಾಕ್ಟರ್‌ನ್ನು ಚಾಲನೆ ಮಾಡಿಕೊಂಡು ಠಾಣೆಗೆ ತಂದಂತಹ ಚಾಲಕನ ಹೆಸರು ನೆನಪಿಲ್ಲ. ಟ್ರಾಕ್ಟರ್‌ನ್ನು ಚಾಲನೆ ಮಾಡಿಕೊಂಡು ಬಂದ ಚಾಲಕನನ್ನು ದೋಷಾರೋಪಣ ಪಟ್ಟಿಯಲ್ಲಿ ಸಾಕ್ಷಿದಾರರನ್ನಾಗಿ ಸೇರಿಸಿಲ್ಲ. 2 ನೇ ಎದುರುದಾರರು ನೀಡಿರುವ ನೋಟೀಸಿನಲ್ಲಿ ಟ್ರಾಕ್ಟರ್‌ನ ಕೀ ನನ್ನ ಬಳಿ ಇದೆ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ಸುಳ್ಳು ಹೇಳಿರುತ್ತಾರೆ ಎಂದು ಹೇಳುತ್ತಾರೆ. 2 ನೇ ಎದುರುದಾರರು ನೀಡಿರುವ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುವ ಬಗ್ಗೆ ನನಗೆ ನೆನಪಿಲ್ಲ. 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್ ಸಂಖ್ಯೆ ಕೆ.ಎ.16/ಟಿ.ಎ.6357 ಕ್ಕೆ

ಸಂಬಂಧಿಸಿದಂತೆ ಟ್ರೈಲರ್ ಇರುವ ಬಗ್ಗೆ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಮಾಹಿತಿಯನ್ನು ಪಡೆದುಕೊಂಡಿಲ್ಲ. 2 ನೇ ಎದುರುದಾರರು ಬೇರೆಯವರಿಗೆ ಸೇರಿದ ಟ್ರೈಲರ್‌ನ್ನು ತೆಗೆದುಕೊಂಡು ಬಂದು 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್‌ಗೆ ಉಪಯೋಗಿಸುತ್ತಿದ್ದರು. 2 ನೇ ಎದುರುದಾರರು ಬೇರೆಯವರಿಗೆ ಸೇರಿದ ಟ್ರೈಲರ್‌ನ್ನು ಉಪಯೋಗಿಸುತ್ತಿದ್ದರು ಎಂಬ ಬಗ್ಗೆ ನನಗೆ ಬಾತ್ಮಿದಾರರು ಮಾಹಿತಿಯನ್ನು ನೀಡಿದ್ದು, ಹಾಗಾಗಿ ಆ ಕುರಿತು ಹೇಳಿಕೆಯನ್ನು ಪಡೆದುಕೊಂಡಿಲ್ಲ. ಅಮಾನತ್ತುಪಡಿಸಿಕೊಂಡ ಕೆ.ಎ.16/ಟಿ.ಎ.6357 ರ ಟ್ರಾಕ್ಟರ್‌ನ ಇಂಜಿನಿನ ವಾಹನ ತಪಾಸಣ ವರದಿಯನ್ನು ಪಡೆದುಕೊಂಡಿಲ್ಲ. ಪಿರ್ಯಾದುದಾರರು, ಗಾಯಾಳುಗಳು ಹಾಗೂ ನಾನು ಸೇರಿಕೊಂಡು 2 ನೇ ಎದುರುದಾರರಿಗೆ ಸೇರಿದ ಟ್ರಾಕ್ಟರ್ ಈ ಪ್ರಕರಣಕ್ಕೆ ಸಂಬಂಧಿಸಿದ ಅಪಘಾತದಲ್ಲಿ ಒಳಪಡದಿದ್ದಾಗ್ಯೂ ಕೂಡ ಸೇರ್ಪಡೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದೋಷಾರೋಪಣ ಪಟ್ಟಿಯಲ್ಲಿ 1 ನೇ ಆರೋಪಿತರ ವಿಳಾಸ ಸಣ್ಣ ಕೆಂಚಪ್ಪ ಎಂ.ಎಂ. ಬಿನ್ ಲೇಟ್ ಮಹೇಶ್ವರಪ್ಪ, ಕೆ.ಎ.16/ಇ.ಎಫ್.6937 ರ ಬೈಕಿನ ಚಾಲಕ, ಚೀರನಹಳ್ಳಿ ಗ್ರಾಮದ, ಹೊಳಲ್ಕೆರೆ ತಾಲ್ಲೂಕು ಎಂದು ನಮೂದು ಇದೆ ಎಂದರೆ, ಸಾಕ್ಷಿ ಪ್ರಥಮ ವರ್ತಮಾನ ವರದಿಯಲ್ಲಿ ಉಲ್ಲೇಖಿಸಿರುವ ವಿಳಾಸವೆ ದೋಷಾರೋಪಣ ಪಟ್ಟಿಯಲ್ಲೂ ಸಹ ತಪ್ಪಾಗಿ ಉಲ್ಲೇಖ ಆಗಿದೆ ಎಂದು ಹೇಳುತ್ತಾರೆ. ನನ್ನ ತನಿಖೆಯ ಕಾಲಕ್ಕೆ ಬೈಕಿನ ತಪ್ಪಿನಿಂದ ಅಪಘಾತ ಆಗಿಲ್ಲ, ಬದಲಾಗಿ ಚೀರನಹಳ್ಳಿ ಗ್ರಾಮದ ಸ.ನಂ.41/1 ಎ ಜಮೀನಿನಲ್ಲಿ ನಿಲ್ಲಿಸಿದ್ದ ಟ್ರೈಲರ್‌ನಲ್ಲಿ ಕೆಲಸ ಮಾಡುವಾಗ ಅಪಘಾತ ಆಗಿರುತ್ತದೆ ಎಂದು ಕಂಡುಬಂದಿದ್ದು, ಆ ಬಗ್ಗೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ. ನನ್ನ ತನಿಖೆಯ ಕಾಲಕ್ಕೆ ಕೆ.ಎ.16/ಇ.ಎಫ್.-6937 ರ ಬೈಕಿನ ಮಾಲೀಕನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಗಾಯಾಳು ಸಂತೋಷ್‌ರವರಿಗೆ ಜಮೀನು ಇರುವ ಬಗ್ಗೆ ವಿಚಾರಣೆ ಮಾಡಿಲ್ಲ. ಗಾಯಾಳು ಸಂತೋಷ್ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನನ್ನ ತನಿಖೆಯ ಕಾಲಕ್ಕೆ ಕೆ.ಎ.16/ ಟಿ.ಎ.6357 ರ ಟ್ರಾಕ್ಟರ್‌ಗೆ ಲಗತ್ತಾಗಿದೆ ಎಂದು ಹೇಳುವ ಟ್ರೈಲರ್‌ನಿಂದ ಅಪಘಾತ ಆಗಿಲ್ಲ ಎಂದು, ಬದಲಾಗಿ ಕೆ.ಎ.16/ಇ.ಎಫ್.6937 ರ ಬೈಕಿನ ತಪ್ಪಿನಿಂದ ಅಪಘಾತ ಆಗಿದೆ ಎಂದು ಕಂಡುಬಂದಿದ್ದಾಗ್ಯೂ ಕೂಡ, ಗಾಯಾಳುವಿಗೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ರವರ ಮರು ಹೇಳಿಕೆಯ ಸಮಯದಲ್ಲಿ ಟ್ರಾಕ್ಟರ್‌ನ್ನು ಜಮೀನಿನಲ್ಲಿ ತಂದು ನಿಲ್ಲಿಸಿದ್ದರು ಎಂದು ಹೇಳಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದ ಅಪಘಾತದ ಕುರಿತಾಗಿ ಟ್ರೈಲರ್‌ನ ಅಸ್ತಿತ್ವ ಇಲ್ಲದ ಕಾರಣ ಮತ್ತು ಟ್ರೈಲರ್‌ನ್ನು ಪತ್ತೆಹಚ್ಚದ ಕಾರಣ ನನ್ನ ತನಿಖೆಯು ಪರಿಪೂರ್ಣತೆಯಿಂದ ಕೂಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯ ಕಾಲದಲ್ಲಿ ನನಗೆ

ಸುಳ್ಳು ಮಾಹಿತಿಯನ್ನು ನೀಡಿದರೆ ಆ ರೀತಿ ಸುಳ್ಳು ಮಾಹಿತಿಯನ್ನು ನೀಡಿದಂತಹ ಸಾಕ್ಷಿದಾರರ ವಿರುದ್ಧ ಕಾನೂನಿನ ಕ್ರಮವನ್ನು ಜರುಗಿಸಲು ಅವಕಾಶ ಇದೆ ಎಂದರೆ ಸರಿ. ಈ ಅಪಘಾತಕ್ಕೆ ಸಂಬಂಧಿಸಿದಂತೆ ಪಿರ್ಯಾದುದಾರರು ನೀಡಿರುವ ದೂರು ಸುಳ್ಳಿನಿಂದ ಕೂಡಿರುತ್ತದೆ ಎಂದು ನಾನು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ ಕಾಲಕ್ಕೆ ಕಂಡುಬಂದಿದ್ದು, ಹಾಗಾಗಿ ಪಿರ್ಯಾದುದಾರರ ವಿರುದ್ಧ ಕಾನೂನಿನ ಕ್ರಮವನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣದ ತೀರ್ಪು ಬಂದ ನಂತರ ಕಾನೂನಿನ ಪ್ರಕ್ರಿಯೆಯನ್ನು ಈಗ ಇರುವ ಸಿಬ್ಬಂಧಿಗಳು ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.